ಶ್ರೀ ಆರ್.ಎಸ್. ಪಾಟೀಲ್.— ನಮ್ಮ ಪಾಟೀಲ್‌ರವರು ಬಹಳ ಹಿಂದುಳಿದ ಪ್ರದೇಶದಿಂದ ಬಂದಿರುವವರೆಂದು ನಮಗೆ ಗೊತ್ತಿದೆ. ತಮಗೂ ಗೊತ್ತಿರಬಹುದು ನಾನೂ ಕೂಡ ಅದೇ ಜಿಲ್ಲೆಯಿಂದ ಬಂದಿರುವವನು. ಶ್ರೀಮಾನ್ ಬಂಗಾರಪ್ಪನವರು ತಮ್ಮ ಇಲಾಖೆಯ ಬೇಡಿಕೆಗೆ ಉತ್ತರ ಕೊಡುವಾಗ ತಮಗೆ ಸಮಾಧಾನವಾಗುವಹಾಗೆ ಉತ್ತರ ಕೊಡುತ್ತಾರೆ. ಹಾಗೂ ನಿಮ್ಮ ಅಭಿವೃದ್ಧಿಯನ್ನು ಶ್ರೀಮಾನ್ ಬಂಗಾರಪ್ಪನವರು ನೋಡಿಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ.

Stay to the proceedings of Land Tribunal, Buntwal Taluk by High Court.

413 SRI B.V. KAKKILAYA (Vittal).— Will the Minister for Revenue be pleased to state :—

(a) the number of orders issued by the High Court of Karnataka staying the proceedings of the Two Land Tribunals of Buntwal Taluk in 1974-75. 1975-76. 1976-77 and 1977-78 in respect of applications under (i) Sec. 48-A and (ii) Sec. 48-C of the Karnataka Land Reforms Act;

(b) the numder of orders issued by the Karnataka Hlgh Court staying the operationof the orders of the two Land Tribunals (i) under Sec. 48A (ii) under Sec.48-C;

(c) the number of writ petition finally disposed of and the numbers till pending before the High Court;

(d) the number of cases where tenants ordered to be registered as occupants are dispossessed of the land and the number of cases where stay of Tribunals' order under Sec. 48-C resulted in depriving tenants of possession of land?

SRI B. BASAVALINGAPPA (Minister for Revenue)

(a)—

	Under Sec. 48-A of Karnataka Land Reforms Act.	*Under Sec. 48-C of Karnataka Land Reforms Act.*
1974-75	...	...
1975-76	11	...
1976-77	...	...
1977-78	...	...
Total	11	...

(b)—		
1974-75	6	...
1975-76	...	7
1976-77	33	15
1977-78	40	...
Total	79	22
(c)—		
(i) No. disposed	4	4
(ii) No. pending	86	18

(d) (i) No. of cases where tenants ordered to be registered as occupants are restrained from entering upon the land by High Court Stay 2

(ii) No. of cases where stay of Tribunals' order under Sec. 48-C resulted in tenants being restrained from entering upon the land 14

ಶ್ರೀ ಬಿ.ವಿ. ಕಕ್ಕಿಲಾಯ.—ತಮ್ಮ ಉತ್ತರದಲ್ಲಿ ಹೇಳಿರುವಂತೆ ಭೂಸುಧಾರಣೆಯ ಶಾಸನದ ೪೮(೫) ಕಲಮಿನ ಮೇರೆಗೆ ಭೂನ್ಯಾಯ ಮಂಡಲಿಗಳ ಆದೇಶಕ್ಕೆ ತಡೆಯಾಜ್ಞೆ ನೀಡಿರುವ ಕೇಸುಗಳು ೧೪ ಜನ ರೈತರು ಎಂಬುದಾಗಿ ತಾವು ಹೇಳಿದ್ದಿರಿ. ಹೈಕೋರ್ಟಿನ ತಡೆಯಾಜ್ಞೆಯ ಕಾರಣವನ್ನೇ ಉಪಯೋಗಮಾಡಿಕೊಂಡು ಅವರ ಜಮೀನನ್ನು ಬಿಡಿಸಿದ್ದಾರೆ. ಈಗ ಅವರ ಕೈಯ್ಯಲ್ಲಿ ಜಮೀನು ಇಲ್ಲ. ಭೂನ್ಯಾಯ ಮಂಡಲಿಯವರು ಅಲ್ಲಿಗೆ ಹೋಗಿ ಭೂಮಿ ಗೇಣಿದಾರರ ಸ್ವಾಧೀನದಲ್ಲಿದೆ ಎನ್ನುವ ಆಧಾರದಮೇಲೆ ಭೂಮಾಲೀಕರು ಮಧ್ಯ ಪ್ರವೇಶ ಮಾಡಬಾರದು ಎಂಬುದಾಗಿ ಆರ್ಡರ್ ಕೊಟ್ಟಿದ್ದಾರೆ. ಆದರೆ ಹೈಕೋರ್ಟಿನವರು ನೀಡಿದ ತಡೆಯಾಜ್ಞೆಯನ್ನು ಉಪಯೋಗ ಮಾಡಿಕೊಂಡು ಗೇಣಿದಾರರನ್ನು ಅಲ್ಲಿಂದ ಹೊರಗೆ ಹಾಕಿದ್ದಾರೆ, ಹಾಗೆ ಅನುಭೋಗದಾರರಾಗಿ ನೊಂದಣಿಗೊಳಿಸುವ ಬಗ್ಗೆ ಗೇಣಿದಾರರಿಗೆ ಆದೇಶವಿತ್ತ ಪ್ರಕರಣಗಳಲ್ಲಿ ಗೇಣಿದಾರರು ಜಮಿನನ್ನು ಪ್ರವೇಶಕ್ಕಾಗಿ ಹೈಕೋರ್ಟಿನವರು ಎರಡು ರೈತರಿಗೆ ತಡೆಯಾಜ್ಞೆ ನೀಡಿದ್ದಾರೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಇದನ್ನೆಲ್ಲಾ ಹೈಕೋರ್ಟಿನ ಗಮನಕ್ಕೆ ತೆಗೆದುಕೊಂಡು ಬಂದು ಅಲ್ಲಿ ಸ್ಟೆಳವನ್ನು ಭೂನ್ಯಾಯ ಮಂಡಲಿಯವರು ಪರಿಶೀಲನೆ ಮಾಡಿ ಆ ಜಮೀನು ಗೇಣಿದಾರರ ಸ್ವಾಧೀನದಲ್ಲಿದ್ದುದನ್ನು ಮನಗಂಡೇ ಆ ರೀತಿ ಅಂತಿಮ ತೀರ್ಮಾನ ಮಾಡಿದ್ದಾರೆ. ಇದಕ್ಕೆ ತಾವು ತಡೆಯಾಜ್ಞೆ ನೀಡಿದ್ದರಿಂದ ನಿಜವಾಗಿಯೂ ಗೇಣಿದಾರರಿಗೆ ತೊಂದರೆಯಾಗಿದೆಯೆಂಬುದನ್ನು ತಮ್ಮ ಅಕೌಂಟೆಂಟ್ ಜನರಲ್ ಮೂಲಕವಾಗಲೀ ಅಥವಾ ವಕೀಲರ ಮೂಲಕವಾಗಲೀ ಹೈಕೋರ್ಟಿನ ಗಮನಕ್ಕೆ ತಂದು ಇಂತಹ ಕೇಸುಗಳನ್ನು ಬೇಗ ತೀರ್ಮಾನ ಮಾಡಿ ರೈತರಿಗೆ ಅನುಕೂಲ ಆಗುವಂತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ತಮಗೆ ಕಾನೂನಿನ ವ್ಯವಹಾರ ಗೊತ್ತಿರಬೇಕು. ಯಾವ ಹಂತದಲ್ಲೇ ಆಗಲೀ ಭೂನ್ಯಾಯ ಮಂಡಲಿಯವರು ಕೊಟ್ಟಂತಹ ತೀರ್ಮಾನಕ್ಕೆ ಹೈಕೋರ್ಟಿನವರು ಸ್ಟೇ ಮಾಡಿದ್ದಾರೆ ಅದಕ್ಕೆ ನಾವು ಎನೂ ಮಾಡುವುದಕ್ಕಾಗುವುದಿಲ್ಲ. ಆದರೆ ಅಂತಹ ಕೇಸುಗಳನ್ನು ಬೇಗ ವಿಚಾರಣೆಗೆ ತೆಗೆದುಕೊಂಡು ತೀರ್ಮಾನ ಮಾಡಿ ಎಂಬುದಾಗಿ ನಾವು ಹೇಳಬಹುದು. ಆದರೆ ತಮಗೆ ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ, ಭೂನ್ಯಾಯ ಮಂಡಲಿಯವರ ಪ್ರಕಾರ ಏನು ಖಾತೆ ಇರುತ್ತದೆ, ಅದಕ್ಕೆ ಎನೂ ಚ್ಯುತಿ ಬರುವುದಿಲ್ಲ. ತಮಗೆ ಸಂಶಯ ಬೇಡ.

ಶ್ರೀ ಬಿ.ವಿ. ಕಕ್ಕಿಲಾಯ.— ತಾವು ಆದೇಶ ಕೊಟ್ಟಿದ್ದೀರಿ. ಆದರೆ ತಾವು ಆ ರೀತಿ ಆದೇಶವನ್ನು ಕೊಟ್ಟಿದ್ದರೂ ಕೂಡ ತಮ್ಮ ಉತ್ತರದ ಪ್ರಕಾರ ೨ ಜನ ಗೇಣಿದಾರರು ಜಮೀನಿನ ಪ್ರವೇಶಕ್ಕೆ ಹೈಕೋರ್ಟಿನವರು ತಡೆಯಾಜ್ಞೆ ನೀಡಿದ್ದಾರೆ. ಹಾಗೂ ಭೂನ್ಯಾಯ ಮಂಡಲಿಯವರು ೧೪ ಜನ

ಗೇಣಿದಾರರ ವಿಷಯದಲ್ಲಿ ಜಮೀನು ಆವರ ಸ್ವಾಧೀನದಲ್ಲಿದೆ ಎನ್ನುವ ಆಧಾರದ ಮೇಲೆ ಇಂಟೇರಿಯಂ ಆರ್ಡರ್ ಕೊಟ್ಟಿರುತ್ತಾರೆ. ಅಂತಹ ವಿಷಯದಲ್ಲೂ ಹೈಕೋರ್ಟಿನಿಂದ ಸ್ಟೇ ಆರ್ಡರ್ ತೆಗೆದುಕೊಂಡು ಬಂದು, ಮತ್ತು ಪೋಲೀಸರ ಸಹಾಯವನ್ನು ತೆಗೆದುಕೊಂಡು ಆ ಜನರನ್ನು ಅಲ್ಲಿಂದ ಹೊರಗೆ ಹಾಕಿದ್ದಾರೆ. ೧೪ ಮತ್ತು ೨ ಕೇಸುಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ಇವರಿಗೇ ಆ ಜಮೀನು ಸಿಕ್ಕುವ ಹಾಗೆ ತಾವು ನಿರ್ದಿಷ್ಟವಾದ ಕ್ರಮವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಹೈಕೋರ್ಟಿನ ತಡೆಯಾಜ್ಞೆಯನ್ನು ವೆಕೇಟ್ ಮಾಡಿದ ಮೇಲೆ ತಾವು ಹೇಳಿದಹಾಗೆ ನಾವು ಕೆಲಸ ಮಾಡಬಹುದು. ನ್ಯಾಯವಾದ ರೀತಿಯಲ್ಲಿ ಟ್ರಿಬ್ಯುನಲ್ಸ್‌ಗಳು ಕೆಲಸ ಮಾಡುತ್ತಿವೆ. ಆದರೆ ಜನಗಳಿಗೆ ತೊಂದರೆಯಾಯಿತು ಎಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಹೈಕೋರ್ಟಿನ ತಡೆಯಾಜ್ಞೆ ಕೊಟ್ಟ ಮೇರೆಗೆ ಕೆಲವರಿಗೆ ತೊಂದರೆಯಾಗಿದೆ, ಕೆಲವರಿಗೆ ತೊಂದರೆಯಾಗಿಲ್ಲ. ಹೈಕೋರ್ಟಿನವರು ತಡೆಯಾಜ್ಞೆಯನ್ನು ತೆಗೆದಮೇಲೆ ನಾವು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ತಾವು ಚಿಂತನೆ ಮಾಡಬೇಕಾಗಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.— ಆರಂಭದಲ್ಲಿ ಭೂನ್ಯಾಯ ಮಂಡಲಿಯವರು ನೋಟೀಸ್ ಕೊಡುವಾಗ ಅದು ಕಾನೂನು ಬದ್ಧವಾಗಿಲ್ಲ ಎನ್ನುವ ಒಂದೇ ಕಾರಣದಿಂದ ಸ್ಟೇ ಕೊಟ್ಟಿದ್ದಾರೆ ಪ್ರೊಸೀಡಿಂಗ್ಸನ್ನು ಸ್ಟೇ ಮಾಡಿದ್ದಾರೆ. ಆ ರೀತಿ ಸ್ಟೇ ಮಾಡಿದಂತಹ ಕೇಸುಗಳು ನಮ್ಮ ಒಂದು ಭೂನ್ಯಾಯ ಮಂಡಲಿಯ ಮಟ್ಟಿಗೆ ಹೇಳುವುದಾದರೆ ೧೧ ಕೇಸುಗಳು ಆ ರೀತಿ ಸ್ಟೇಯಾಗಿವೆ. ಈವಾಗ ನೋಟೀಸನು ಕೊಡುವಾಗ ಯಾವರೀತಿ ಕೊಡಬೇಕೆಂದು ಕಾನೂನಿನಲ್ಲಿ ತಿದ್ದುಪಡಿ ಮಾಡಿ ಅದನ್ನು ಕಾನೂನಿನಲ್ಲಿ ಸರಿಪಡಿಸಿ ಹೊಸ ರೀತಿಯಲ್ಲಿ ನೋಟೀಸ್ ಕೊಟ್ಟಿದ್ದೇವೆ. ಅದೂ ಕೂಡ ಹೈಕೋರ್ಟಿನಲ್ಲಿ ಪೆಂಡಿಂಗ್ ಆಯಿತು. ತಾವು ಎಕ್ಸ್‌ಪಿಡೇಟ್ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿ, ತನಿಖೆ ಮಾಡುವುದಕ್ಕೆ ಭೂನ್ಯಾಯಮಂಡಲಿಗೆ ಅವಕಾಶ ಇರಬೇಕೆಂದು ಕಾನೂನು ಬದಲಾವಣೆ ಮಾಡಿದ್ದೀರಿ. ಅದನ್ನು ಬದಲಾವಣೆ ಮಾಡಿದ ಮೇಲೂ ಕೆಲವು ಅಧಿಕಾರಿಗಳು ಪೆಂಡಿಂಗ್ ಆಡ್‌ಜರ್ನಮೆಂಟ್ ನೀಡುತ್ತಿದ್ದಾರೆ. ಅವುಗಳನ್ನು ತಕ್ಷಣ ಎಕ್ಸ್‌ಪಿಡೇಟ್ ಮಾಡಿ ಕೂಡಲೇ ತನಿಖೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಕ್ರಮ ಇವತ್ತೇ ತೆಗೆದುಕೊಳ್ಳುತ್ತೇನೆ. ಕೆಲವು ಅಧಿಕಾರಿಗಳು ಗೊತ್ತಿಲ್ಲದೆ ಮಾಡಿರುತ್ತಾರೆ. ಆ ರೀತಿ ಮಾಡಕೂಡದು ಎಂಬುದಾಗಿ ಆದೇಶ ಕೂಡ ಮಾಡಿದ್ದೇವೆ. ಹೈಕೋರ್ಟಿನವರು ತಡೆಯಾಜ್ಞೆಯನ್ನು ವೆಕೇಟ್ ಮಾಡಿದ ಮೇಲೆ ಇಂಥಾದ್ದಕ್ಕೆ ಅವಕಾಶವಾಗಲಾರದು ಎಂಬುದು ನನ್ನ ಭಾವನೆ.

Purchase of books written by Sri C. H. Maridevaru

581 SRI G. S. SHIVANANJAPPA (Bellavi).—Will the Minister for Education be pleased to state:—

(*a*) whether it is a fact that one Sri C.H.Maridevaru, Teacher in Sri Siddaganga B.Ed. College has written two books called (a) Sikshana Tatva Shastra, (b) Munnadeda Sikshana Manashastra;

(*b*) whether it is not a fact that these books got prizes and State Academy Award respectively;

(*c*) whether it is not a fact that C H. Maridevaru applied for bulk purchase of the said books with the Director of Text books;

(*d*) if so, whether the Government has purchased said books in bulk, if not, why;

(*e*) what is the recommendation of the Taxt Book Committee for purchase of these books; what are the criteria adopted for purchase of books, who has reviewed these books?

Purchase of books written by Sri C.H. Maridevaru